ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 47 ಎಸ್‌ಪಿಎ 2002

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು , ದಿನಾಂಕ:13-5-2003

## ಸುತ್ತೋಲೆ

ವಿಷಯ: ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳು ಇವರ ಮೇಲಿನ ದೌರ್ಜನ್ಯ ನಿಯಂತ್ರಣ ಸಲುವಾಗಿಪ್ರತಿಜಿಲ್ಲೆಯಲ್ಲಿ ಒಬ್ಬ ವಿಶೇಷ ಅಧಿಕಾರಿಯ ನೇಮಕಾತಿ ಕುರಿತು.

**************

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಜನಸಮುದಾಯದ ಮೇಲೆ ನಡೆಯುತ್ತಿರುವ ಜಾತಿ ನಿಂದನೆ , ದೌರ್ಜನ್ಯ , ಕಲಹಗಳು, ಕಿರುಕುಳ ಇವರಿಗಾಗಿಯೇ ಮೀಸಲಿರಿಸಿದ ಸರ್ಕಾರದ ಅನುದಾನ ದುರುಪಯೋಗ ಇನ್ನು ಮುಂತಾದವುಗಳ ರಕ್ಷಣೆಗೆ ಭಾರತ ಸರ್ಕಾರವು ದೌರ್ಜನ್ಯ ನಿಯಂತ್ರಣ ಕಾಯ್ದೆ ಹಾಗೂ ಅನುಸೂಚಿತ ಜಾತಿ ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ತಡೆ) ಅಧಿನಿಯಮ 1989 ನಾಗರೀಕ ಹಕ್ಕು ಸಂಕರಕ್ಷಣಾ 1955 ಮತ್ತು ಅನುಸೂಚಿತ ಮತ್ತು ಅನುಸೂಚಿತ ಬುಡಕಟ್ಟುಗಳು ದೌರ್ಜನ್ಯ ನಿಯಂತ್ರಣ ನಿಯಮಗಳು 1995 ರಲ್ಲಿ ಸಂರಕ್ಷಣೆ ಒದಗಿಸಿ ಸದರಿ ಜನಸಮುದಾಯಕ್ಕೆ ಉಪಲಬ್ಧಗಳನ್ನು ಒದಗಿಸಲಾಗಿದೆ.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ತಡೆ ನಿಯಮಗಳು)1995ರ ನಿಯಮ 10ರಲ್ಲಿ ದೌರ್ಜನ್ಯಕ್ಕೆ ಒಳಗಾಗುವ ಜನಸಮುದಾಯದ ಸಮಸ್ಯೆ ಕುರಿತು ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಲು ನಿಯಮ 10 ರಲ್ಲಿ ಉಪಲಬ್ಧಗಳಿದ್ದು ಆ ವಿಶೇಷ ಅಧಿಕಾರಿಯು ಕಾರ್ಯಸೂಚಿಯು ಈ ಕೆಳಗಿನಂತಿರುವುದು.

### 10. APPOINTMENT OF A SPECIAL OFFICER:

In the identified area a special Officer not below the rank of a Additional District Magistrate shall be appointed to Co-ordinate with the District Magistrate, Superintendent of Police or other Officers responsible for implementing the provisions of the Act, various committees and the Scheduled Castes and the Scheduled Tribes Protection Cell.

THE SPECIAL OFFICER SHALL BE RESPONSIBLE FOR:

(i) Providing immediate relief and other facilities to the victims of atrocity and initiate necessary measures to prevent or avoid Re-occurance of atrocity;

(ii) Setting up an awareness center and organising work-shop in the

Identified area or at the district head quarters to educate the persons belonging to the Scheduled Castes and the Scheduled Tribes about their rights and the protection available to them under the provisions of various Central and State enactments or rules and schemes etc. framed there-in;

(iii) Co-ordinating with the Non Governmental organisations and Providing necessary facilities and financial and other type of assistance to non-Governmental Organisation for maintaining centers or organising workshops;

ಮೇಲ್ಕಂಡ ಉಪಲಬ್ಧಗಳನ್ವಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಟ್ಟುಗಳ(ದೌರ್ಜನ್ಯ ತಡೆ) ನಿಯಂತ್ರಣ ನಿಯಮ 1995 ರ ನಿಯಮ 10ರಲ್ಲಿನ ಉಪಲಬ್ಧಗಳನ್ನು ಚಲಾಯಿಸಿ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಜಿಲ್ಲಾದಂಡಾಧಿಕಾರಿಗಳು ಪರಿಶಿಷ್ಠರ ಮೇಲಿನ ದೌರ್ಜನ್ಯವನ್ನು ತಡೆಯಲು ಚಾಲ್ತಿಯಲ್ಲಿರುವ ಉಪಬಂಧಗಳನ್ನು ಅನುಷ್ಠಾನಗೊಳಿಸುವ ದೌರ್ಜನ್ಯ ನಿಯಂತ್ರಣ ತಡೆಗೆ ನೆರವಾಗಲು ರಚಿಸಲಾದ ಸಮಿತಿಗಳಿಗೆ ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳು (ದೌರ್ಜನ್ಯ ನಿಯಂತ್ರಣ ತಡೆ) ನಿಯಮಗಳು 1995 ರ ನಿಯಮ 10 ರಲ್ಲಿ ನಮೂದಿಸಲಾದ ಅಂಶಗಳಿಗೆ ಸಂಬಂದಿಸಿದಂತೆ ಎಲ್ಲಾ ಜಿಲ್ಲಾಧಿಕಾರಿ/ಜಿಲ್ಲಾದಂಡಾಧಿಕಾರಿಗಳು ವಿಶೇಷ ಜಿಲ್ಲಾಧಿಕಾರಿಯ ದರ್ಜೆಗೆ ಕಡಿಮೆ ಇಲ್ಲದ ವಿಶೇಷ ಜಿಲ್ಲಾಧಿಕಾರಿ ಅಥವಾ ತಕ್ಕಣದ ಹಿರಿಯ ಅಧಿಕಾರಿಯನ್ನು ವಿಶೇಷ ಅಧಿಕಾರಿಯನ್ನು ನೇಮಿಸಿ ಸೂಕ್ತ ಕಛೇರಿ ಆದೇಶ ಹೊರಡಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

(ಎಂ.ಎಸ್.ಮರುಳಸಿದ್ದಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಗೆ,

ಸಂಕಲನಕಾರರು ಕರ್ನಾಟಕದ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿದ 500 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿದೆ.

1. ನಿರ್ದೇಶಕರು ಭಾರತ ಸರ್ಕಾರದ ಸಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ಶಾಸ್ತ್ರೀಭವನ ನವದೆಹಲಿ-1(ನಂ.11012/2/2002 - ಪಿ.ಸಿ.ಆರ್.(ಡೆಸ್ಕ್)
2. ಎಲ್ಲಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
3. ಡೈರಕ್ಟರ್ ಜನರಲ್ /ಇನ್ಸಪೆಕ್ಟರ್ ಜನರಲ್ ಆಫ್ ಪೋಲಿಸ್ ಬೆಂಗಳೂರು
4. ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು